C.C–837/2025

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 28.04.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಕೆ.ಹೆಚ್.ಆರ್ ರವರಿಂದಃ**

**1.** ನಾನು ಬಟ್ಟೆ ಅಂಗಡಿಯನ್ನು ಪರವಾನಗಿ ಪಡೆದು ಸಾಗರದ ಶಿವಾಜಿ ರಸ್ತೆಯಲ್ಲಿ ಇರುವ ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದೇನೆ. ಸದರಿ ಪರವಾನಗಿ ಮತ್ತು ಬಾಡಿಗೆ ಕರಾರನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. ನನ್ನ ಹೆಸರಿಗೆ ಯಾವುದೇ ಕೃಷಿ ಜಮೀನು ಇಲ್ಲ. ಆದರೆ ನನ್ನ ಹೆಸರಿಗೆ ಇದ್ದು, ಮನೆಯ ವ್ಯವಹಾರವನ್ನು ನಾನೇ ನಡೆಸುತ್ತಿದ್ದೇನೆ. ಕೃಷಿ ಜಮೀನು ನನ್ನ ತಂದೆಯ ಹೆಸರಿಗೆ ಇರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. ಬಟ್ಟೆ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ನಾನು ಮಾರಾಟ ತೆರಿಗೆ ಮತ್ತು ಜಿ.ಎಸ್.ಟಿಯನ್ನು ಪಾವತಿಸುತ್ತಿಲ್ಲ. ಬಟ್ಟೆ ವ್ಯಾಪಾರದಿಂದ ನನಗೆ ಎಷ್ಟು ಆದಾಯ ಇದೆ ಎನ್ನುವ ಬಗ್ಗೆ ನನ್ನ ಬ್ಯಾಂಕ್ ಅಕೌಂಟ್ ಸ್ಟೇಟ್ ಮೆಂಟ್ ಇದೆ ಸದರಿ ಅಕೌಂಟ್ ಸ್ಟೇಟ್ ಮೆಂಟ್ ಅನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. ಅಗತ್ಯವಿದ್ದರೆ ಹಾಜರು ಪಡಿಸಬಲ್ಲೆ.

**2.** ಬಟ್ಟೆ ಅಂಗಡಿಯಿಂದ ನನಗೆ ವಾರ್ಷಿಕ 8–10 ಲಕ್ಷ ರೂ.ಗಳ ಲಾಭ ಇದೆ. ನನ್ನ ವಾರ್ಷಿಕ ವಹಿವಾಟು ಸುಮಾರು 25 ಲಕ್ಷ ರೂ. ಇರಬಹುದು. ಈ ಕುರಿತು ನಾನು ಆದಾಯ ತೆರಿಗೆಯನ್ನು ಪಾವತಿಸುತ್ತಿಲ್ಲ ಮತ್ತು ರಿಟರ್ನ್ಸ್ ಅನ್ನು ಸಹ ಸಲ್ಲಿಸುತ್ತಿಲ್ಲ. ಕಾನೂನಿನ ಪ್ರಕಾರ ಹೆಚ್ಚು ವ್ಯಾಪಾರ ವಹಿವಾಟು ಇದ್ದರೆ ಐ.ಟಿ. ರಿಟರ್ನ್ಸ್ ಅನ್ನು ಸಲ್ಲಿಸಬೇಕು ಎಂದರೆ ಸರಿ. ನನಗೆ ವಾರ್ಷಿಕ 25 ಲಕ್ಷ ರೂ. ಗಳ ವಹಿವಾಟು ಇಲ್ಲ ಮತ್ತು 8–10 ಲಕ್ಷ ರೂ.ಗಳ ಲಾಭವು ಇಲ್ಲ ಎಂದರೆ ಸರಿಯಲ್ಲ.

**3.** ನನ್ನ ಬಟ್ಟೆ ಅಂಗಡಿಯ ವ್ಯವಹಾರವನ್ನು ನಗದು ಮತ್ತು ಖಾತೆ ಮೂಲಕ ಮಾಡುತ್ತಿದ್ದೇನೆ. ಆರೋಪಿತನು ಕೆಳದಿ ಗ್ರಾಮ ಪಂಚಾಯತಿಯಲ್ಲಿ ಬಿಲ್ ಕಲೆಕ್ಟರ್ ಎಂದು ಕೆಲಸ ಮಾಡುತ್ತಿದ್ದಾನೆ. ನಮ್ಮ ಊರಿನಿಂದ ಆರೋಪಿತನ ಮನೆ ಅರ್ಧ ಕಿ.ಮೀ ದೂರವಿದ್ದು, ಸುಮಾರು 10 ವರ್ಷಗಳಿಂದ ಆರೋಪಿತನು ನನಗೆ ಪರಿಚಯವಿದ್ದಾನೆ. ಆರೋಪಿತನ ಕುಟುಂಬಕ್ಕೆ ಕೃಷಿ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 15.03.2024 ರಂದು ಆರೋಪಿತನು ನನ್ನ ಬಳಿ ಹಣವನ್ನು ಕೇಳಿ ಹೋಗಿದ್ದನು. ದಿನಾಂಕ 20.03.2024 ರಂದು ಆರೋಪಿತನಿಗೆ ನಾನು ಹಣ ಕೊಟ್ಟಿದ್ದೇನೆ. ಆರೋಪಿತನು ನನ್ನನ್ನು ಹಣ ಕೇಳಿದಾಗ ಮತ್ತು ನಾನು ಅವನಿಗೆ ಹಣವನ್ನು ಕೊಟ್ಟಾಗ ನಮ್ಮಿಬ್ಬರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ದಿನಾಂಕ 15.03.2024 ರ ಪೂರ್ವದಲ್ಲಿ ಆರೋಪಿತನು

ನನ್ನನ್ನು ಹಣ ಕೇಳಿರಲಿಲ್ಲ. ದಿನಾಂಕ 20.03.2024 ರಂದು ಹಣ ತೆಗೆದುಕೊಳ್ಳಲು ಆರೋಪಿತನು ಬರುತ್ತಾನೆ ಎಂದು ನನಗೆ ಮೊದಲೇ ಮಾಹಿತಿ ಇತ್ತು. ಆರೋಪಿತನು ನನ್ನಿಂದ ಹಣ ಪಡೆದುಕೊಂಡಾಗ ವೀಡಿಯೋ ಮಾಡಿಕೊಂಡಿದ್ದು, ನಾನು ಇತರೆ ದಾಖಲೆಗಳನ್ನು ಆರೋಪಿತನಿಂದ ಬರೆಯಿಸಿಕೊಂಡಿಲ್ಲ. ಸದರಿ ವೀಡಿಯೋವನ್ನು ನಾನು ನ್ಯಾಯಾಲಯದ ಮುಂದೆ ಈವರೆಗೆ ಹಾಜರು ಪಡಿಸಿಲ್ಲ. ಅಗತ್ಯವಿದ್ದರೆ ಹಾಜರು ಪಡಿಸುತ್ತೇನೆ. ಆರೋಪಿತನು ಸುಮಾರು 8-9 ದಿನಗಳಲ್ಲಿ ನನ್ನಿಂದ ಪಡೆದ ಹಣವನ್ನು ವಾಪಸ್ಸು ನೀಡುವುದಾಗಿ ಹೇಳಿದ್ದನು. ಸದರಿ ವಿಷಯವನ್ನು ನನ್ನ ನೋಟೀಸ್ ಮತ್ತು ದೂರಿನಲ್ಲಿ ಹೇಳಿಲ್ಲ. ಯಾವ ದಿನಾಂಕದಂದು ಹಣವನ್ನು ವಾಪಸ್ಸು ಕೊಡುತ್ತಾನೆ ಎಂದು ಆರೋಪಿತನು ಹೇಳಿದ್ದನು ಎಂದು ನನ್ನ ನೋಟೀಸ್ ಮತ್ತು ದೂರಿನಲ್ಲಿ ಹೇಳಿರಬಹುದು. 8-9 ದಿನಗಳಲ್ಲಿ ವಾಪಸ್ಸು ಕೊಡುವುದಾಗಿ ನೋಟೀಸ್ ಮತ್ತು ದೂರಿನಲ್ಲಿ ನಾನು ಬರೆಸಿರಬಹುದು. ದಿನಾಂಕ 29.04.2024 ರಂದು ಆರೋಪಿತನು ಹಣವನ್ನು ಮರು ಪಾವತಿ ಮಾಡುವುದಾಗಿ ಹೇಳಿದ್ದನೇ ಎಂದರೆ, ಇರಬಹುದು.

**4.** ನಾನು ಆರೋಪಿತನಿಗೆ ಹಣವನ್ನು ಕೊಟ್ಟೆ ಎನ್ನುವ ದಿನ ಮತ್ತು ಆರೋಪಿತನು ನನಗೆ ಚೆಕ್ ಅನ್ನು ನೀಡಿದನು ಎನ್ನುವ ದಿನಾಂಕದ ನಡುವೆ ಇರುವ ದಿನಾಂಕದ ಅವಧಿಯಲ್ಲಿ ನಾನು ಆರೋಪಿತನ ವಿರುದ್ಧ ಪೋಲಿಸ್ ಠಾಣೆಗೆ ದೂರನ್ನು ಸಹ ನೀಡಿದ್ದೇನೆ. ದೂರನ್ನು ನೀಡಿದ ದಿನಾಂಕ ನನಗೆ ನೆನಪಿಲ್ಲ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯದ ಮುಂದೆ ಇನ್ನೂ ಹಾಜರು ಪಡಿಸಿಲ್ಲ. ಅಗತ್ಯವಿದ್ದರೆ ಹಾಜರು ಪಡಿಸುತ್ತೇನೆ. ಆರೋಪಿತನಿಗೆ 500 ರೂ. ಮುಖಬೆಲೆಯ ನೋಟುಗಳ ಮೂಲಕ 1,50,000/- ರೂ.ಗಳನ್ನು ನೀಡಿದ್ದೇನೆ. ಈ ವ್ಯವಹಾರ ನಡೆದಾಗ 20 ಸಾವಿರಕ್ಕಿಂತ ಹೆಚ್ಚು ನಗದು ವ್ಯವಹಾರವನ್ನು ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲ ಎಂಬುದು ನನಗೆ ತಿಳಿದಿತ್ತು. ಈ ಪ್ರಕರಣದಲ್ಲಿ ಹೇಳಿದ 1,50,000/- ರೂ. ಹಣವನ್ನು ಆರೋಪಿತನ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲು ನನಗೆ ತೊಂದರೆ ಇರಲಿಲ್ಲ.

**5.** ದಿನಾಂಕ 16.10.2024 ರಂದು ಆರೋಪಿತನು ನನಗೆ ನಿಪಿ-1 ರ ಚೆಕ್ ಅನ್ನು ಕೊಟ್ಟನು. ನನ್ನ ಪ್ರಕಾರ ಮತ್ತು ನಾನು ಹಾಜರು ಪಡಿಸಿದ ದಾಖಲೆಗಳಂತೆ ಆರೋಪಿತನು ನನ್ನಿಂದ ಹಣವನ್ನು ಪಡೆದ 7 ತಿಂಗಳ ನಂತರ ಆರೋಪಿತನು ನನಗೆ ನಿಪಿ-1 ರ ಚೆಕ್ ಅನ್ನು ನೀಡಿದ್ದಾನೆ ಎಂದರೆ ಸರಿ. ಆರೋಪಿತನು ತನ್ನ ಎಲ್ಲಾ ವ್ಯವಹಾರಗಳನ್ನು ಬ್ಯಾಂಕ್ ಖಾತೆಯ ಮೂಲಕ ಮಾಡುತ್ತಾನೆ ಎಂಬುದು ನನಗೆ ತಿಳಿದಿದೆ. ಆರೋಪಿತನು ಗ್ರಾಮ ಪಂಚಾಯತಿಯ ಕಂದಾಯ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡಿದ್ದರಿಂದ ಹಣಕಾಸಿನ ವರ್ಷದ ಕೊನೆಯ ಒಳಗೆ ಸದರಿ ಹಣವನ್ನು ಗ್ರಾಮ ಪಂಚಾಯತಿಗೆ ಕಟ್ಟಬೇಕಾಗಿರುವುದರಿಂದ ನನಗೆ ಹಣದ ಅವಶ್ಯಕತೆ ಇದೆ ಎಂದು ಹೇಳಿ 1,50,000/- ರೂ.ಗಳನ್ನು

ನನ್ನಿಂದ ಆರೋಪಿತನು ಸಾಲವಾಗಿ ಪಡೆದುಕೊಂಡಿದ್ದಾನೆ. ಸದರಿ ಆರೋಪಿತನು ಪಂಚಾಯತಿಗೆ ಹಣವನ್ನು ಕಟ್ಟುವುದು ಬಾಕಿ ಇದೆಯೇ ಅಥವಾ ಇಲ್ಲವೇ ಎನ್ನುವುದನ್ನು ನಾನು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ಆರೋಪಿತನು ಪಂಚಾಯತಿಗೆ ಪಾವತಿಸಿಬೇಕಾಗಿದ್ದ ಯಾವುದೇ ಹಣ ಬಾಕಿ ಉಳಿಸಿಕೊಂಡಿರಲಿಲ್ಲ ಮತ್ತು ಆ ಕಾರಣಕ್ಕಾಗಿ ನನ್ನಿಂದ ದೂರಿನಲ್ಲಿ ಹೇಳಿದ 1,50,000/- ರೂ.ಗಳನ್ನು ಸಾಲವಾಗಿ ಪಡೆದಿಲ್ಲ ಎಂದರೆ ಸರಿಯಲ್ಲ.

**6.** ಆರೋಪಿತನ ವಿರುದ್ಧ ನಾನು ಸಿಸಿ 1633/2025 ರಂತೆ ಮತ್ತೊಂದು ಚೆಕ್ ಬೌನ್ಸ್ ಕೇಸನ್ನು ದಾಖಲು ಮಾಡಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿಯೂ ಸಹ ಆರೋಪಿತನು ದಿನಾಂಕ 20.03.2024 ರಂದು 1,50,000/- ರೂ.ಗಳನ್ನು ಆರೋಪಿತನು ಸಾಲವಾಗಿ ಕೇಳಿ ಅದೇ ದಿನ ಪಡೆದುಕೊಂಡಿದ್ದನು. ಎರಡು ಪ್ರಕರಣಗಳಲ್ಲಿನ ಹಣವನ್ನು ಆರೋಪಿತನು ಬೇರೆ ಬೇರೆ ಸಮಯದಲ್ಲಿ ನನ್ನ ಬಳಿ ಕೇಳಿದ್ದನು. ಆ ದಿನ ಈ ಪ್ರಕರಣದ ಹಣವನ್ನು ನಾನು ನಗದಾಗಿ ನೀಡಿದ್ದು, ಸಿಸಿ 1633/2025 ರ ಪ್ರಕರಣದ ಹಣವನ್ನು ನೆಫ್ಟ್ ಮೂಲಕ ವರ್ಗಾವಣೆ ಮಾಡಿದ್ದೇನೆ. ಎರಡು ಪ್ರಕರಣಗಳಲ್ಲಿ ಆರೋಪಿತನು ಚೆಕ್ಕುಗಳನ್ನು ದಿನಾಂಕ 16.10.2024 ರಂದು ನೀಡಿರುವುದಾಗಿ ಹೇಳಿದ್ದೇನೆ ಎಂದರೆ ಸರಿ. ಎರಡು ಪ್ರಕರಣದಲ್ಲಿನ ಹಣವನ್ನು ಒಂದೇ ಚೆಕ್ಕಿನ ಮೂಲಕ ವಾಪಸ್ಸು ಪಡೆದುಕೊಳ್ಳಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಮುಂದುವರೆದು ಆರೋಪಿತನು ನನಗೆ ಎರಡು ಚೆಕ್ಕುಗಳನ್ನು ಬರೆದುಕೊಟ್ಟಿದ್ದಾನೆ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.